ಶ್ರೀ ಹನುಮೇಗೌಡ ಕೆ.ಹೆಚ್.(ಹಾಸನ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲಾ ಆಸ್ಪತ್ರೆಯ ಹಳೆಯ ಕಟ್ಟಡವು ಶಿಥಿಲಾವಸ್ಥೆಯಲ್ಲಿದ್ದು, ಮಳೆಗಾಲದಲ್ಲಿ ರೋಗಿಗಳ ಇರುವಿಕೆಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದರ ರಿಪೇರಿಗೆ ೧೫ ಲಕ್ಷಕ್ಕೂ ಮೇಲ್ಪಟ್ಟು ಹಣ ಬೇಕಾಗುವುದೆಂದು ಅಂದಾಜು ತಯಾರಾಗಿರುವುದು ನಿಜವೇ?

ಇ) ಈ ಕಟ್ಟಡದ ರಿಪೇರಿ ಕೆಲಸವನ್ನು ಸರ್ಕಾರ ಆದಷ್ಟು ಜಾಗ್ರತೆ ಮಾಡಿಸುವುದೇ?

ಡಾ: ಎ.ಬಿ.ಮಲಕರೆಡ್ಡಿ: (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿದೆ.

ಆ) ಹೌದು, ಹಾಸನ ಜಿಲ್ಲಾ ಆಸ್ಪತ್ರೆಯನ್ನು ೧೦೦೦ ಹಾಸಿಗೆಗಳ ಆಸ್ಪತ್ರೆಯಾಗಿ ಅಭಿವೃದ್ಧಿಪಡಿಸಲು ಮಂಜೂರಾತಿ ದೊರೆತಿದ್ದು ಲೋಕೋಪಯೋಗಿ ಇಲಾಖೆ ಕೆಲಸ ಪ್ರಾರಂಭಿಸಿ, ಅನುದಾನ ಕೊರತೆಯಿಂದ ಜನವರಿ ೧೯೯೯ರಿಂದ ಕೆಲಸವನ್ನು ಸ್ಥಗಿತಗೊಳಿಸಿತು.

ಈ ಆಸ್ಪತ್ರೆಯನ್ನು ಹಾಲಿ ಇರುವ ೩೪೪ ಹಾಸಿಗೆಗಳಿಂದ ೫೦೦ ಹಾಸಿಗೆಗಳ ಆಸ್ಪತ್ರೆಯಾಗಿ ಅಭಿವೃದ್ಧಿಪಡಿಸುವ ಕಾಮಗಾರಿಯು ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಯೋಜನೆಯಡಿ ಸೇರಿರುತ್ತದೆ. ರಾಷ್ಟ್ರೀಯ ಸ್ಪರ್ಧಾತ್ಮಕ ಗುತ್ತಿಗೆ ಕರೆದು ಕಾಮಗಾರಿಯನ್ನು ರೂ.೩೬೫.೨೮ ಲಕ್ಷಗಳಿಗೆ ಗುತ್ತಿಗೆಗೆ ನೀಡಿದ್ದು, ಕಾಮಗಾರಿಯನ್ನು ದಿನಾಂಕ ೬-೧೧-೨೦೦೦ದಂದು ಪ್ರಾರಂಭಿಸಿ ಪ್ರಗತಿಯಲ್ಲಿದೆ. ಈ ಕಾಮಗಾರಿಯಲ್ಲಿ ಹಳೆ ಕಟ್ಟಡದ ಛಾವಣಿ ರಿಪೇರಿಯೂ ಸಹ ಸೇರಿರುತ್ತದೆ.

ಇ) ಈಗ ನವೀಕರಣ ಕಾಮಗಾರಿಯು ಪ್ರಗತಿಯಲ್ಲಿದ್ದು, ಆದ್ಯತೆ ಮೇಲೆ ರಿಪೇರಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

ಉನ್ನತ ಶಿಕ್ಷಣದಲ್ಲಿ ಶೇಕಡ ೧೫ ರಷ್ಟು ಅನುದಾನ.

೧೪೦೧(೧೬೨೫)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರವು ಉನ್ನತ ಶಿಕ್ಷಣದ ಅನುದಾನಿತ ಕಾಲೇಜುಗಳಿಗೆ ಶೇಕಡ ೧೫ ರಷ್ಟು ಅನುದಾನವನ್ನು ಕಡಿತಗೊಳಿಸಲು ನಿರ್ಧರಿಸಿದೆಯೆ;

ಆ) ಈ ನಿರ್ಧಾರವನ್ನು ಕಾಲೇಜು, ವಿಶ್ವವಿದ್ಯಾಲಯಗಳ ನೌಕರರು ವಿರೋಧಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ನಿರ್ಧಾರದಿಂದ ಉನ್ನತ ಶಿಕ್ಷಣದ ಮೇಲೆ ಪರಿಣಾಮ ಬೀರುವುದಿಲ್ಲವೆ;

ಈ) ಈ ನಿರ್ಧಾರ ಎಂದಿನಿಂದ ಜಾರಿಗೆ ಬರುತ್ತದೆ;

ಡಾ: ಜಿ.ಪರಮೇಶ್ವರ: (ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವರು):

ಅ ಆ ಇ ಈ) ದಿನಾಂಕ: ೧೩-೨-೨೦೦೧ ಆದೇಶದನ್ವಯ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ನೀಡಲ್ಪಾಗುತ್ತಿರುವ ಅನುದಾನದಲ್ಲಿ ಶೇ.೧೫ರಷ್ಟು ಕಡಿತಗೊಳಿಸಿದ್ದು ಹಾಗೂ ಈ ವ್ಯತ್ಯಾಸವನ್ನು ಆಡಳಿತ ಮಂಡಳಿಯು ತಮ್ಮ ಸ್ವಂತ ಸಂಪನ್ಮೂಲಗಳಿಂದ ಭರಿಸಲು ಸೂಚಿಸಿತ್ತು.

ಅನುದಾನಿತ ಕಾಲೇಜುಗಳಿಗೆ ವೇತನಾನುದಾನದಲ್ಲಿ ಕಡಿತಗೊಳಿಸಿರುವುದರಿಂದ, ಶಿಕ್ಷಕರು ಶಿಕ್ಷಕೇತರರು ಮತ್ತು ವಿದ್ಯಾರ್ಥಿಗಳಿಗೆ ಆಗಬಹುದಾದ ತೊಂದರೆಗಳ ಹಿನ್ನೆಲೆಯಲ್ಲಿ ಈ ವಿಷಯವನ್ನು ಸರ್ಕಾರವು ಪುನರ್ ಪರಿಶೀಲಿಸಿದೆ. ಈಗ ಸರ್ಕಾರವು ಕಾಲೇಜುಗಳಿಗೆ ಅಂದರೆ ಪದವಿ, ಇಂಜಿನೀಯರಿಂಗ್ ಮತ್ತು ಶಿಕ್ಷಣ ಕಾಲೇಜುಗಳಿಗೆ ವೇತನಾನುದಾನ ಕಡಿತವನ್ನು ಪ್ರಸ್ತುತ ಇರುವ ಸಿಬ್ಬಂದಿ ವೇತನಾನುದಾನವನ್ನು ಕಡಿತಗೊಳಿಸದೆ ಸಂಯುಕ್ತ ಪದವಿ ಕಾಲೇಜುಗಳಿಂದ ಪದವಿ ಪೂರ್ವ ಶಿಕ್ಷಣವನ್ನು ಬೇರ್ಪಡಿಸುವ ಮೂಲಕ ಮತ್ತು ಪ್ರಸ್ತುತ ಖಾಲಿ ಇರುವ ಹುದ್ದೆಗಳನ್ನು ಶಾಶ್ವತ ಅನುದಾನರಹಿತ ಎಂಬುದಾಗಿ ಪರಿಗಣಿಸುವ ಮೂಲಕ ಜಾರಿಗೊಳಿಸಲು ತೀರ್ಮಾನಿಸಿದೆ. ಆದರಂತೆ ದಿನಾಂಕ:೧-೩-೨೦೦೧ರಂದು ತತ್ಸಬಂಧ ಆದೇಶವೊಂದನ್ನು ಹೊರಡಿಸಿದೆ.

ಕರ್ನಾಟಕ ಆರೋಗ್ಯ ಪದ್ಧತಿ ಯೋಜನೆಗಳು.